ದೂರವೇ ಉಳಿದ ತಾಲ್ಲೂಕಿನ ಹಿಂದುಳಿದ ಜನರ ಬೆನ್ನೆಲುಬಾಗಿ, ಜನರಿಗೆ ಸರ್ಕಾರದಿಂದ ಬರಬಹುದಾದ ಎಲ್ಲಾ ಸೌಲಭ್ಯಗಳನ್ನು ನೀಡುತ್ತ, ಅವರಲ್ಲಿ ತಾವು ಒಬ್ಬರಾಗಿ ದುಡಿಯತೊಡಗಿದರು. ಆ ಮೂಲಕ ಅವರು ‘ಅಭಿವೃದ್ಧಿಶೀಲ ಶಾಸಕ’ ಎಂಬ ಬಿರುದು ಪಡೆದರು.

ಇದರ ನಡುವೆ, ಆ ಕಳೆದ ನಾಲ್ಕು ವರ್ಷಗಳ ಅವರ ಅಧಿಕಾರ ಅವಧಿಯಲ್ಲಿ ಅವರಿಗಿದ್ದ ಐನೂರು ಎಂಬತ್ತು ಎಕ್ಕರೆ ಜಮೀನು ನಾಲ್ಕರಷ್ಟಾಗಿತ್ತು! ಜಿಲ್ಲಾ ಕೇಂದ್ರದಲ್ಲಿ ಎಂಟ್ಟತ್ತು ಸೈಟು, ತಾಲ್ಲೂಕು ಕೇಂದ್ರದಲ್ಲಿ ಏಳೆಂಟು ಸೈಟುಗಳು, ಎರಡು ಬಂಗಲೆಯಂತಹ ಮನೆಗಳು ಇದ್ದವು!!.

ಜನರಿಗೆ ನೇರವಾಗಿ ಭೇಟಿಯಾಗಲು ಅನುವಾಗುವಂತೆ ಮಹಾದೇವರವರ ಕುಟುಂಬ ಎರಡು ವರ್ಷದ ಹಿಂದೆ ನಗರಕ್ಕೆ ಶಿಫ್ಟ್ ಆಗಿತ್ತು. ಅವರೊಂದಿಗೆ ರಾಮಚಂದ್ರರವರ ಕುಟುಂಬವೂ ಸೇರಿತ್ತು. ಇದರಿಂದಾಗಿ ಅಣ್ಣ ರಾಮಚಂದ್ರ ಹೃದಯ ಪೂರ್ವಕವಾಗಿ ಸಂತೋಷಗೊಂಡಿದ್ದರು.

ಐದು ವರ್ಷಗಳು ಕಳೆದ ರಾಜ್ಯವು ನಂತರ ಮತ್ತೊಂದು ಎಂ.ಎಲ್.ಎ ಎಲೆಕ್ಷನ್‌ಗೆ ರೆಡಿಯಾಗುತ್ತಿತ್ತು. ಮಹಾದೇವರವರು ಕೂಡ ಮತ್ತದೇ ಪಕ್ಷದಿಂದ ಎಂ.ಎಲ್.ಎ ಆಕಾಂಕ್ಷಿ ಅಭ್ಯರ್ಥಿಯಾಗಿ ಎಲೆಕ್ಷನ್‌ನಲ್ಲಿ ಮತ್ತೆ ಸ್ಪರ್ಧಿಸಿದ್ದರು.

**ಮೂರು**

ರಾಮಚಂದ್ರರವರ ಕುಟುಂಬ ನಗರಕ್ಕೆ ಬಂದು ಸೇರಿದ ಮೇಲೆ ಮಮತಾ ಕಾಲಕ್ಕೆ ತಕ್ಕಂತೆ ಸಂಪೂರ್ಣ ಬದಲಾಗಿದ್ದಳು. ಕಾಲೇಜು ಮತ್ತು ನಗರದಲ್ಲಿ ಸಿಕ್ಕ ಹೊಸ ಗೆಳೆಯ, ಗೆಳತಿಯರೊಂದಿಗೆ ಸ್ಪೋರ್ಟ್ಸ್ ಕ್ಲಬ್, ಪಬ್, ಬರ್ತ್ ಡೇ ಪಾರ್ಟಿಗಳು, ಟೂರ್‌ಗಳು ಅವಳ ಹೊಸ ಜೀವನಕ್ಕೆ ಸೇರ್ಪಡೆಯಾದ ಹೊಸ ವಿಷಯಗಳಾಗಿದ್ದವು. ಸ್ಪೋರ್ಟ್ಸ್ ಕ್ಲಬ್‌ನಲ್ಲಿ ದಿವಾಕರ್ ಎಂಬ ಹುಡುಗ ಸ್ನೇಹಿತನಾಗಿದ್ದ. ದಿವಾಕರ್ ವಾಲಿಬಾಲ್‌ನಲ್ಲಿ ಚಾಂಪಿಯನ್. ಆತ ಉದಯೋನ್ಮುಖ ಆಟಗಾರನಾಗಿ ರಾಜ್ಯದಲ್ಲಿ ಹೆಸರು ಮಾಡಿದ್ದ. ಆದರೆ ಜಾತಿಯಲ್ಲಿ ಕೆಳ ಜಾತಿಯವನಾದ್ದರಿಂದ ಸ್ಪೋರ್ಟ್ಸ್‌ನೊಳಗೂ ತೂರಿಕೊಂಡ ಜಾತಿ ರಾಜಕಾರಣ ಅವನು ಮೇಲೇಳದಂತೆ ವ್ಯವಸ್ಥಿತವಾಗಿ ತುಳಿದಿತ್ತು. ಈ ಎಲ್ಲ ನೋವನ್ನು ದಿವಾಕರ್ ಮಮತಾಳೊಂದಿಗೆ ಹೇಳಿಕೊಂಡಿದ್ದ. ಮಾಡರ್ನ್ ಹುಡುಗಿಯಾದ ಮಮತಾ, ಜಾತಿ ರಾಜಕಾರಣದ ವಿರುದ್ಧ ಒಂದು ಪುಟ್ಟ ಭಾಷಣವನ್ನೇ ಮಾಡಿದ್ದಳು. ಅವಳ ಆ ನೈತಿಕ ಬೆಂಬಲವು ಅವಳಲ್ಲಿ ಅವನೊಂದಿಗಿನ ಸ್ನೇಹವನ್ನು ಪ್ರೇಮದ ಬಣ್ಣಕ್ಕೆ ತಿರುಗಿಸಿತ್ತು. ಅದು ಮುಂದುವರಿದು, ಮನೆಯವರಿಗೆ ಸುಳ್ಳು ಹೇಳಿ ದಿವಾಕರ್‌ನೊಂದಿಗೆ ಪಬ್ಬು, ಬರ್ತ್‌ಡೇ ಪಾರ್ಟಿಗಳು, ಗೋವಾ, ಊಟಿ ಟೂರ್‌ಗಳು ಮುಗಿದಿದ್ದವು.

ಇವರ ಪ್ರೇಮದ ವಾಸನೆ ಮೊದಲಿಗೆ ಸಿಕ್ಕಿದ್ದು ಮಹಾದೇವರಿಗೆ. ಆ ಪ್ರೇಮವು ಮದುವೆಯ ಹಂತದವರೆಗೂ ಬಂದು ತಲುಪಿದೆ ಎಂಬ ಮಾಹಿತಿಯು ಅವರಿಗೆ ತಲುಪಿತ್ತು. ಒಮ್ಮೆ, ರೆಡ್ ಹ್ಯಾಂಡ್ ಆಗಿ ಅವರಿಬ್ಬರು ಮಹಾದೇವರಿಗೆ ಸಿಕ್ಕಿದ್ದರೂ ಕೂಡ!.

‘ನಿನ್ನ ಕೆಳ ಜಾತಿಯವನೊಂದಿಗಿನ ಪ್ರೇಮದಿಂದಾಗಿ ನನ್ನ ಪೊಲಿಟಿಕಲ್ ಕೆರಿಯರ್ ಹಾಳಾಗುತ್ತದೆ. ಜೊತೆಗೆ ಕುಟುಂಬದ ಮರ್ಯಾದೆ ಹಾಳಾಗುತ್ತದೆ’ ಎಂದು, ಮಹಾದೇವ ಮಮತಾಳಿಗೆ ನೇರವಾಗಿ ಎಚ್ಚರಿಸಿದ್ದರೂ ಕೂಡ. ಆ ಎಚ್ಚರಿಕೆಗೆ ಜಗ್ಗದ ಆ ಪ್ರೇಮಿಗಳಿಬ್ಬರೂ ಮಹಾದೇವರು ಎಲೆಕ್ಷನ್ ಬಿಸಿಯಲ್ಲಿರುವುದರಿಂದ ಅವರ ಸಂಪೂರ್ಣ ಗಮನ ಎಲೆಕ್ಷನ್ ಕಡೆಗೆ ಇರುತ್ತದೆ, ನಮ್ಮ ಕಡೆ ಯಾವುದೇ ಗಮನವಿರುವುದಿಲ್ಲ ಎಂದು ಗ್ರಹಿಸಿ, ಆ ಬಿಸಿಯ ದಿನಗಳೇ ನಾವು ಓಡಿಹೋಗಿ ಮದುವೆಯಾಗಲು

